೨. ಸಭೆಯಲ್ಲಿ ಮಂಡಿಸಲಾಗುವ ಕಾಗದ ಪತ್ರಗಳು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಮತ್ತು ಕಾನೂನು ಸಚಿವರು).—

(ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಕ್ಷ ಮಂತ್ರಿಗಳವರ ಪರವಾಗಿ.—

೧೯೮೫ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕ್ ಪಂಚಾಯಿತಿ ಸಮಿತಿಗಳು, ಮಂಡಲ್ ಪಂಚಾಯಿತಿಗಳ ಹಾಗೂ ನ್ಯಾಯ ಪಂಚಾಯತಿಗಳ ಶಾಸನದ ೩೧ನೇ ಕಲಮಿನ ಮೇರೆಗೆ,

ಅ) ೧೯೮೫ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯತ್‌ಗಳ ಹಾಗೂ ನ್ಯಾಯ ಪಂಚಾಯತ್‌ಗಳ (ಸ್ಥಾನ, ಉಪಪ್ರಧಾನ ಹಾಗೂ ಸದಸ್ಯರುಗಳ ಪ್ರವಾಸ ಭತ್ಯ ಹಾಗೂ ದಿನ ಭತ್ಯಗಳು) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೧೧ನೇ ಫೆಬ್ರುವರಿ, ೧೯೮೬ರಂದು ಹೊರಡಿಸಲಾದ ಆರ್‌ಡಿಪಿ ೨೩೨ ವಿಎಸಿ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು.

ಆ) ೧೯೮೫ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯತ್‌ಗಳ ಹಾಗೂ ನ್ಯಾಯ ಪಂಚಾಯತ್‌ಗಳು (ಮೇಲ್ಮನವಿಗಳನ್ನು ಸೀಮಿತ ಗೊಳಿಸುವುದು) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೧೯ನೇ ಫೆಬ್ರುವರಿ, ೧೯೮೬ ರಂದು ಹೊರಡಿಸಲಾದ ಆರ್‌ಡಿಪಿ ೨೩೩ ವಿಎಸಿ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು.

ಇ) ೧೯೮೫ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯತ್‌ಗಳ ಹಾಗೂ ನ್ಯಾಯ ಪಂಚಾಯತ್‌ಗಳು (ಪತ್ರ ವ್ಯವಹಾರಗಳು) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೧೨ನೇ ಫೆಬ್ರುವರಿ, ೧೯೮೬ ರಂದು ಹೊರಡಿಸಲಾದ ಆರ್‌ಡಿಪಿ ೮೪ ವಿಎಸಿ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು, ಹಾಗೂ

ಈ) ೧೯೮೫ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯತ್‌ಗಳ ಹಾಗೂ ನ್ಯಾಯ ಪಂಚಾಯತ್‌ಗಳು (ದಾಖಲೆಗಳ ನಕಲು ಪ್ರತಿಗಳನ್ನು ಕೊಡುವುದು) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೨೧ನೇ ಫೆಬ್ರುವರಿ, ೧೯೮೬ರಂದು ಹೊರಡಿಸಲಾದ ಆರ್‌ಡಿಪಿ ೨೩೪ ವಿಎಸಿ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುವುದು.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ವರದಿಯನ್ನೊಪ್ಪಿಸುವುದು

ಅಧ್ಯಕ್ಷರು.—ಶ್ರೀ ಹೆಚ್. ಜಿ. ಚನ್ನಪ್ಪನವರ ಪರವಾಗಿ ಯಾರಾದರೂ ವರದಿಯನ್ನು ಸಭೆಯ ಮುಂದಿಡುತ್ತೀರಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೆ ನಾನು ಶ್ರೀ ಚನ್ನಪ್ಪನವರ ಪರವಾಗಿ ಭರವಸೆ ಸಮಿತಿಯ ಪ್ರಥಮ ವರದಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಯಿತು.

ಮನವಿಗಳನ್ನು ಒಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಹಿರಣ್ಯಕೇಶಿ ಏತ ನೀರಾವರಿ ಯೋಜನೆ ಕೈಗೊಳ್ಳುವುದರ ಬಗ್ಗೆ ಮನವಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಮನವಿಯನ್ನು ಒಪ್ಪಿಸಲಾಯಿತು.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಶಿರಹಟ್ಟಿ ತಾಲ್ಲೂಕಿನ ಮಾಗಡಿ ದರನಾಪೂರ ಗ್ರಾಮದ ಪರಿಶಿಷ್ಟ ವರ್ಗದವರಿಗೆ ಮಂಜೂರಾದ ಜಮೀನನ್ನು ಬೇರೆಯವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ವಶಪಡಿಸಿಕೊಂಡಿರುವ ಬಗ್ಗೆ ಮನವಿಯನ್ನೊಪ್ಪಿಸುತ್ತೇನೆ.